# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.124/2026**

| | | |
|---|---|---|
| ಸಾಕ್ಷಿದಾರರ ಹೆಸರು | ಸಾದಿಕ್ | ಸಿ.ಡಬ್ಲ್ಯು-2 |
| ತಂದೆಯ ಹೆಸರು | ಮೊಹಮ್ಮದ್ ಗೌಸ್ | ಪಿ .ಡಬ್ಲ್ಯೂ-3 |
| ವಯಸ್ಸು | 28 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಕೂಲಿ ಕೆಲಸ | ದಿನಾಂಕಃ |
| ವಾಸಃ | ಸಾಗರ | 11.05.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 1 ನನ್ನ ಹೆಂಡತಿ. ಚಾ.ಸಾ 3 ನನ್ನ ತಾಯಿ. ಚಾ.ಸಾ 4 ರಿಂದ 6 ಗೊತ್ತು. ಆರೋಪಿತನು ನನ್ನ ತಮ್ಮ.

**2.** ದಿನಾಂಕ 17.10.2023 ರಂದು ರಾತ್ರಿ 10.00 ಗಂಟೆಗೆ ನಾನು ಕೆಲಸ ಮುಗಿಸಿ ಮನೆಗೆ ಊಟಕ್ಕೆ ಬಂದಿದ್ದೆ. ನಾನು ಮತ್ತು ನನ್ನ ತಮ್ಮ ಊಟ ಮಾಡುತ್ತಿದ್ದಾಗ ಆರೋಪಿತನು ಅವಾಚ್ಯವಾಗಿ ಬೈಯ್ದು, ನನ್ನನ್ನು ಮನೆ ಬಿಟ್ಟು ಹೋಗು ಎಂದು ಹೇಳುತ್ತಿದ್ದನು. ನಂತರ ನನ್ನ ಮತ್ತು ಆರೋಪಿತನ ನಡುವೆ ಮಾತಿಗೆ ಮಾತು ಬೆಳೆದಾಗ ಆರೋಪಿತನು ನನ್ನ ಕೈ ಬೆರಳಿಗೆ ಕಚ್ಚಿ, ಕುತ್ತಿಗೆಯನ್ನು ಹಿಚುಕಿ ಬೀಳಿಸಿ ಹಲ್ಲೆ ಮಾಡುತ್ತಿದ್ದನು. ನಾನು ಕೂಗಾಡುತ್ತಿದ್ದಾಗ ಚಾ.ಸಾ 1 ರವರು ಜಗಳವನ್ನು ಬಿಡಿಸಿದಾಗ ಆರೋಪಿತನು ಚಾ.ಸಾ 1 ರವರನ್ನು ಕುರಿತು ನಮ್ಮಿಬ್ಬರ ಮಧ್ಯೆ ನೀವೇಕೆ ಬರುತ್ತೀರಾ ಎಂದು ಅವರನ್ನು ಎಳೆದು ದಬ್ಬಿದನು. ಆಗ ಚಾ.ಸಾ 1 ರವರು ಗರ್ಭಿಣಿ ಇದ್ದು, ಅವರ ಹೊಟ್ಟೆ ಮಂಚಕ್ಕೆ ತಾಗಿ ನೋವುಂಟಾಗಿರುತ್ತದೆ. ಆಗ ನ್ಯಾಯಾಲಯದ ಮುಂದಿರುವ ಎಂ.ಒ-1 ರ ದೊಣ್ಣೆಯಿಂದ ಆರೋಪಿತನು ನನಗೆ ಹೊಡೆದನು. ಚಾ.ಸಾ 4 ರವರು ಜಗಳವನ್ನು ಬಿಡಿಸಿದರು. ಮರು ದಿನವೂ ಸಹ ಆರೋಪಿತನು ಗಲಾಟೆ ಮಾಡಿ ಬೆದರಿಕೆ ಹಾಕಿದನು. ಚಾ.ಸಾ 1 ರವರು ಹೊಟ್ಟೆ ನೋವು ಎಂದಿದ್ದಕ್ಕೆ ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆಸ್ಪತ್ರೆಯಲ್ಲಿ ಪೋಲಿಸರು ಚಾ.ಸಾ 1 ರವರ ಹೇಳಿಕೆಯನ್ನು ಪಡೆದರು.

**3.** ದಿನಾಂಕ 19.10.2023 ರಂದು ಪೋಲಿಸರು ನಮ್ಮ ಮನೆಗೆ ಬಂದು ಪಂಚನಾಮೆ ಕ್ರಮ ಜರುಗಿಸಿ, ನಕ್ಷೆ ತಯಾರಿಸಿ, ಫೋಟೋ ತೆಗೆದು, ಎಂ.ಒ–1 ರ ದೊಣ್ಣೆಯನ್ನು ಅಮಾನತ್ತು ಪಡಿಸಿ, ನನ್ನ ಹೇಳಿಕೆಯನ್ನು ಪಡೆದರು.

**<u>ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಎಂ.ಆರ್.ಎಸ್ ರವರಿಂದಃ–</u>**

**1.** ನನ್ನ ತಂದೆಗೆ ನಾನು ಮತ್ತು ಆರೋಪಿತನು ಇಬ್ಬರೇ ಮಕ್ಕಳು. ಅಬ್ದುಲ್ ರಜಾಕ್ ರವರು ನನ್ನ ತಂದೆಯ ಹಿರಿಯ ಮಗ. ಬಳಸಗೋಡಿನಲ್ಲಿ ನಮಗೆ ನಿವೇಶನ ಮತ್ತು ಮನೆ ಇತ್ತು ಎಂದರೆ ಸರಿ. ನನ್ನ ತಂದೆಗೆ ಪಾರ್ಶ್ವ ವಾಯು ಆಗಿದ್ದಾಗ ಕುಟುಂಬದ ಆಸ್ತಿಗಳ ಸಂಬಂಧ ನಾವೆಲ್ಲಾ ಒಂದು ದಾನ ಪತ್ರ ಮಾಡಿಕೊಂಡಿದ್ದೆವು ಎಂದರೆ ಸರಿ. ಆ ಪತ್ರ ಆದ ನಂತರ ಕತ್ತಲೆ ಬಜಾರ್ ನಲ್ಲಿರುವ ಒಂದು ನಿವೇಶನವನ್ನು ಆರೋಪಿತನು ಮಾರಾಟ ಮಾಡಿದನು. ಆ ಪತ್ರಕ್ಕೆ ನಾನು ಸಹ ಸಹಿ ಮಾಡಿದ್ದೇನೆ. ಹೆಚ್ ಕೆ ಎಸ್ ಲೇ ಔಟ್ ನಲ್ಲಿ ನಾನೇ ಹಣ ಕೊಟ್ಟು ನಿವೇಶನವನ್ನು ಆರೋಪಿತನು ಮೂಲಕ ಖರೀದಿಸಿದ್ದೆ. ಸದರಿ ನಿವೇಶನದ ಕ್ರಯದ ದಾಖಲೆಗಳು ಆರೋಪಿತನ ಹೆಸರಿನಲ್ಲಿ ಇವೆ ಎಂದರೆ ಸರಿ. ಸದರಿ ನಿವೇಶನದ ವಿಚಾರವಾಗಿ ನನಗೆ ಆರೋಪಿತನಿಗೆ ಮತ್ತು ಚಾ.ಸಾ 1 ರವರ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ಹೆಚ್ ಕೆ ಎಸ್ ಲೇ ಔಟ್ ನಲ್ಲಿರುವ ಆಸ್ತಿಯ ಬಗ್ಗೆ ನನ್ನ ಮತ್ತು ಆರೋಪಿತನ ನಡುವೆ ಸಾಕಷ್ಟು ಬಾರಿ ಮಾತುಕತೆಯಾಗಿದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಸಂಬಂಧ ಈಗ ಒಂದು ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಆರೋಪಿತನು ತನ್ನ ಕಷ್ಟಗಳನ್ನು ತೀರಿಸಿಕೊಳ್ಳಲು ಹೆಚ್ ಕೆ ಎಸ್ ಲೇ ಔಟ್ ನಲ್ಲಿರುವ ಜಾಗವನ್ನು ಮಾರಾಟ ಮಾಡಲು ಹೊರಟಾಗ ನಾವು ತಕರಾರು ಮಾಡಿದ್ದೇವೆ ಎಂದರೆ ಸರಿಯಲ್ಲ. ಆಸ್ತಿ ವಿಚಾರಕ್ಕೆ ಸಂಬಂಧಪಟ್ಟಂತೆ ರಜಾಕ್ ರವರು ನನ್ನ ವಿರುದ್ಧ ಸಿವಿಲ್ ಪ್ರಕರಣ ದಾಖಲು ಮಾಡಿದ್ದಾರೆ ಎಂದರೆ ಸರಿ.

**2.** ನಾನು ಗ್ಯಾರೇಜ್ ನಲ್ಲಿ ಮಾಲೀಕರು ಹೇಳುವ ಎಲ್ಲಾ ಕೆಲಸಗಳನ್ನು ನಾನು ಕೂಲಿ ಆಳಾಗಿ ಮಾಡುತ್ತಿದ್ದೇನೆ. ಬೆಳಿಗ್ಗೆ 09.00 ರಿಂದ ರಾತ್ರಿ 08.00 ಗಂಟೆಯವರೆಗೆ ನನ್ನ ಕೆಲಸದ ಅವಧಿ. ಗ್ಯಾರೇಜ್ ನಿಂದ ನಮ್ಮ ಮನೆಗೆ ಸುಮಾರು 3–4 ಕಿ.ಮೀ ದೂರವಿದೆ. ದಿನಾಂಕ 17.10.2023 ರಂದು ನಾನು ರಾತ್ರಿ 10.00 ಗಂಟೆಗೆ ಮನೆಗೆ ಬಂದಾಗ ನನ್ನ ತಾಯಿ ಮತ್ತು ಚಾ.ಸಾ 1 ರವರು ಊಟ ಮಾಡಿ ಮಲಗಿದ್ದರು. ನಾನು ಮತ್ತು ಆರೋಪಿತನು ಅಡುಗೆ ಮನೆಯಲ್ಲಿಯೇ ಊಟ ಮಾಡಿದೆವು. ರಾತ್ರಿ 10.10 ಗಂಟೆಗೆ ನನ್ನ ಮತ್ತು ಆರೋಪಿತನ ನಡುವೆ ಗಲಾಟೆ ಪ್ರಾರಂಭವಾಯಿತು. ಆರೋಪಿತನು ಸುಮಾರು 20 ನಿಮಿಷಗಳವರೆಗೆ ಬೈದ್ದುನು. ಆ ಅವಧಿಯಲ್ಲಿಯೇ ಹೊಡೆದಾಟ ಸಹ ಆಯಿತು. ಬೈದ್ದು ನಂತರ ಆರೋಪಿತನು ನನ್ನ ಬಲಗೈನ

ಮಧ್ಯದ ಕೈ ಬೆರಳನ್ನು ಕಚ್ಚಿದನು. ಬಲಗೈನಿಂದ ಹಿಡಿದು ಎಳೆದು ನನ್ನನ್ನು ಬೀಳಿಸಿದನು. ಅಡುಗೆ ಮನೆಯಲ್ಲಿ ಗಲಾಟೆ ಪ್ರಾರಂಭವಾಗಿ ಹಾಲ್ ನಲ್ಲಿ ನನ್ನನ್ನು ಎಳೆದು ಬೀಳಿಸಿದನು. ಅಡುಗೆ ಮನೆ ಪಕ್ಕದ ರೂಂನಲ್ಲಿ ಚಾ.ಸಾ 1 ಮತ್ತು ನನ್ನ ತಾಯಿ ಇದ್ದರು. ಅವರು ಬಂದು ಗಲಾಟೆಯನ್ನು ಬಿಡಿಸಿದರು. ಗಲಾಟೆ ಬಿಡಿಸಿದಾಗ ಸುಮಾರು 10.25 ಗಂಟೆಯಾಗಿರಬಹುದು. ಎಂ.ಒ–1 ರ ದೊಣ್ಣೆ ಆರೋಪಿತನು ಬಳಿ ಇತ್ತು. ಅದನ್ನು ನನ್ನ ತಾಯಿ ಮತ್ತು ಚಾ.ಸಾ 1 ರವರು ನೋಡಿದ್ದಾರೆ. ಆರೋಪಿತನು ಎಂ.ಒ–1 ರಿಂದ ಸುಮಾರು 4–5 ಏಟು ನನ್ನ ಬೆನ್ನು, ಕೈ–ಕಾಲುಗಳಿಗೆ ಹೊಡೆದನು. ಆರೋಪಿತನು ನನ್ನ ಬನಿಯನ್ ಅನ್ನು ಹರಿದಿದ್ದನು.

**3.** ಪೋಲಿಸರು ಬಂದಿದ್ದಾಗ ನಾನು ಹೇಳಿಕೆಯನ್ನು ಕೊಟ್ಟಿದ್ದೇನೆ. ಸಾಕ್ಷಿಯು ಮುಂದುವರೆದು ಅವರು ಬಂದಿದ್ದಾಗ ಮಹಜರನ್ನು ಮಾಡಿದ್ದು, ಅದಕ್ಕೆ ನಾನು ಸಹ ಸಹಿ ಹಾಕಿದ್ದೇನೆ. ಪೋಲಿಸರಿಗೆ ನನ್ನ ಹರಿದ ಬನಿಯನ್ ಅನ್ನು ಪಂಚನಾಮೆ ಕಾಲಕ್ಕೆ ಕೊಟ್ಟಿಲ್ಲ. ದಿನಾಂಕ 19.10.2023 ರಂದು ಸಂಜೆ ಸುಮಾರು 04.30 ಗಂಟೆಗೆ ನನ್ನ ಹೇಳಿಕೆಯನ್ನು ಪಡೆದಿರಬಹುದು. ನಿಖರವಾದ ಸಮಯ ನನಗೆ ನೆನಪಿಲ್ಲ. ಮಹಜರ್ ಮಾಡಿದ ನಂತರ ನಾನು ನನ್ನ ಹೇಳಿಕೆಗೆ ಸಹಿ ಮಾಡಿದ್ದೇನೆ. ದಿನಾಂಕ 19.10.2023 ರಂದು ನಾನು ಕೆಲಸಕ್ಕೆ ಹೋಗಿರಲಿಲ್ಲ. ಆ ದಿನ ನನ್ನೊಂದಿಗೆ ನಾನು, ಚಾ.ಸಾ 1 ಮತ್ತು ಚಾ.ಸಾ 6 ರವರು ಸಹಿಗಳನ್ನು ಮಾಡಿದ್ದೇವೆ. ಯಾರು ಮೊದಲು ಸಹಿ ಮಾಡಿದರು ಎಂದು ಈಗ ನನಗೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತು.

**ಪ್ರಶ್ನೆಃ** ಗಲಾಟೆ ಸಮಯದಲ್ಲಿ ನೀವು ಎಷ್ಟು ಹೊತ್ತಿಗೆ ಕೂಗಿದ್ದೀರಿ ?

**ಉತ್ತರಃ** ಸಮಯ ನನಗೆ ಗೊತ್ತಿಲ್ಲ.

**ಪ್ರಶ್ನೆಃ** ನಿಮ್ಮ ತಾಯಿ ಎಷ್ಟು ಹೊತ್ತಿಗೆ ಬಂದು ಗಲಾಟೆ ಬಿಡಿಸಿದರು?

**ಉತ್ತರಃ** ಸಮಯ ನನಗೆ ಗೊತ್ತಿಲ್ಲ.

**4.** ಪೋಲಿಸ್ ಸಹಾಯವಾಣಿಗೆ ಆ ದಿನ ನಾನು ಕರೆ ಮಾಡಿಲ್ಲ. ನನಗೆ ಆಗಿದ್ದ ಹೊಡೆತಗಳನ್ನು ವೈದ್ಯರಿಗೆ ತೋರಿಸಿದ್ದೇನೆ. ಚಾ.ಸಾ 1 ರವರಿಗೂ ಸಹ ಅದೇ ಆಸ್ಪತ್ರೆಯಲ್ಲಿ ತೋರಿಸಿದ್ದೇನೆ. ಚಾ.ಸಾ 1 ರವರಿಗೆ ಯಾವುದೇ ಬಾಹ್ಯ ಗಾಯಗಳಾಗಿರಲಿಲ್ಲ, ಆದರೆ ಚಾ.ಸಾ 1 ರವರ ಹೊಟ್ಟೆಗೆ ಪೆಟ್ಟಾಗಿತ್ತು. ಆರೋಪಿತನು ನಮ್ಮೊಂದಿಗೆ ಗಲಾಟೆ ಮಾಡಿಲ್ಲ, ನನಗೆ ಕಚ್ಚಿ, ನನಗೆ ಮತ್ತು ಚಾ.ಸಾ 1 ರವರಿಗೆ ಅವಾಚ್ಯವಾಗಿ ಬೈದ್ದು, ದೊಣ್ಣೆಯಿಂದ ಹಲ್ಲೆ ಮಾಡಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಹೆಚ್ ಕೆ ಎಸ್ ಲೇ ಔಟ್ ನ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಚಾ.ಸಾ 1 ರವರ ಮೂಲಕ ಈ ಕೇಸನ್ನು ದಾಖಲು ಮಾಡಿಸಿದ್ದೇನೆ ಎನ್ನುವುದು ಸರಿಯಲ್ಲ. ನಾನು ಹೇಳಿದಂತೆ

ಯಾವುದೇ ಗಲಾಟೆ ನಡೆದಿಲ್ಲ ಎನ್ನುವುದು ಸರಿಯಲ್ಲ. ಚಾ.ಸಾ 4 ರವರು ನಮ್ಮ ಮನೆಯ ಸುತ್ತ ಮುತ್ತಲಿನ ವಾಸಿಯಲ್ಲ ಎನ್ನುವುದು ಸರಿಯಲ್ಲ. ಘಟನಾ ಸ್ಥಳದ ಅಕ್ಕ ಪಕ್ಕ ಹುಚ್ಚಪ್ಪ, ಬೀರಪ್ಪರವರ ಮನೆಗಳು ಇವೆ ಎಂದರೆ ಸರಿ. ಎಂ.ಒ–1 ರ ದೊಣ್ಣೆ ಎಲ್ಲಾ ಕಡೆ ಸಿಗುತ್ತವೆ ಎಂದರೆ, ಸಾಕ್ಷಿಯು ಇರಬಹುದು. ಎಂ.ಒ–1 ಅನ್ನು ಆರೋಪಿತನು ಹೋಮ್ ಗಾರ್ಡ್ ಆಗಿರುವ ಕಾರಣ ಅವನಿಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಎಂ.ಒ–1 ರಿಂದ ಹೊಡೆದರೆ ಬಾಸುಂಡೆ ಗಾಯಗಳು ಬರುತ್ತವೆ ಎಂದರೆ ಸರಿ. ನನಗೆ ಆಗಿದ್ದ ಬಾಸುಂಡೆ ಗಾಯಗಳನ್ನು ವೈದ್ಯರಿಗೆ ತೋರಿಸಿದ್ದೇನೆ. ನಾನು ಗ್ಯಾರೇಜ್ ನಲ್ಲಿ ಕೆಲಸ ಮಾಡುವಾಗ ನನಗೆ ಕಬ್ಬಿಣದ ವಸ್ತುಗಳು ತಾಗಿ ತರಚಿದ ಗಾಯಗಳನ್ನು ವೈದ್ಯರಿಗೆ ತೋರಿಸಿ ಪ್ರಮಾಣ ಪತ್ರವನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ 1 ರವರು ಸ್ವತಃ ಗಾಯಮಾಡಿಕೊಂಡು ಗಾಯದ ಪ್ರಮಾಣ ಪತ್ರ ಪಡೆದಿದ್ದಾರೆ ಎಂದರೆ ಸರಿಯಲ್ಲ. ನನಗೆ ಅರ್ಧ ಆಸ್ತಿ ಬೇಕು ಎಂದು ನಾನು ಆರೋಪಿತನೊಂದಿಗೆ ಜಗಳ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾಲಿಗೂ, ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.